ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಇಲ್ಲಿ ತಾವು ನಡೆಸಿರತಕ್ಕ ತನಿಖೆ ಬಹಳ ರಹಸ್ಯವಾದದ್ದು ಎಂದು ಹೇಳಿದೆ. ಇದನ್ನು ಸರ್ಕಾರ ಯಾವಾಗ ಬಹಿರಂಗ ಮಾಡುತ್ತಾರೆ ?

ಶ್ರೀ ಬಿ. ರಾಚಯ್ಯ.—ಸರ್ಕಾರದವರು ಇದರ ಬಗ್ಗೆ ಒಂದು ಅಭ್ಯೂರು ತೀರ್ಮಾನವನ್ನು ತೆಗೆದುಕೊಂಡಕೂಡಲೇ ಅದನ್ನು ಬಹಿರಂಗಮಾಡಲಾಗುತ್ತದೆ.

Irregular sale of Municipal Sites by President of Kadur Municipality

609. Sri K. M. THAMMAIAH (Kadur).—

Will the Minister of State for Municipal Administration be pleased to state :—

(*a*) whether there was an enquiry into the irregular sale of Municipal sites by the President of Kadur Municipality in 1962 ;

(*b*) if so, the action taken on the enquiry ?

Sri B. M. PATIL (Minister of State for Municipal Administration).—

(*a*) Yes.

(*b*) Action is being taken to surcharge the councillors who voted for confirmation of the irregular sale.

ಶ್ರೀ ಕೆ. ಎಂ. ತಮ್ಮಯ್ಯ.—ಇಲ್ಲಿ ಕೊಟ್ಟಿರತಕ್ಕ ಉತ್ತರದಲ್ಲಿ " action is being taken " ಎಂದು ಹೇಳಿದ್ದಾರೆ. ಯಾವ ರೀತಿ ಕ್ರಮ ಕೈಗೊಳ್ಳಬೇಕೆಂದಿದ್ದೀರಿ ?

†ಶ್ರೀ ಬಿ. ಎಂ. ಪಾಟೀಲ್.—ಅಲ್ಲಿ ಏನೀಗ ನಿವೇಶನಗಳನ್ನು ಅಕ್ರಮವಾಗಿ ವಿಲೇವಾರಿ ಮಾಡಿದ್ದಾರೆಂದು ಹೇಳಲಾಗಿದೆ, ಆ ಸಂದರ್ಭದಲ್ಲಿ ಅಲ್ಲಿನ ಅಧ್ಯಕ್ಷರು ಒಂದು ಮಿಾಟಿಂಗನ್ನು ಕರೆದು ಆ ಕೌನ್ಸಿಲ್ಲಿನ ಮುಂದೆ ಆ ನಿವೇಶನಗಳ ವಿಲೇವಾರಿ ವಿಚಾರವನ್ನಿಟ್ಟು, ಅದಕ್ಕೆ ಅ ರ ಒಪ್ಪಿಗೆಯನ್ನು ಪಡೆದು ಮಾರಾಟ ಮಾಡಿದ್ದಾರೆ. ಆದ್ದರಿಂದ ಆ ದಿವಸ ಆ ಮಿಾಟಿಂಗಿನಲ್ಲಿ ಯಾರು ಯಾರು ಹಾಜರಿದ್ದರೋ ಅವರೆಲ್ಲರ ಮೇಲೂ ಸರ್‌ಚಾರ್ಜ್ ಮಾಡುವುದಕ್ಕೆ ಸೂಚನೆ ಮಾಡಲಾಗಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಅಧ್ಯಕ್ಷರು ಆ ನಿರ್ಣಯವನ್ನು ಟ್ಯಾಂಪರ್ ಮಾಡಿದ್ದಾರೆಂದು ಸರ್ಕಾರಕ್ಕೆ ದೂರನ್ನು ಕೊಟ್ಟಿದ್ದವರ ಬಗ್ಗೆ ಹೇಗೆ ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ಬಿ. ಎಂ. ಪಾಟೀಲ್.—ಆ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲ. ಕೌನ್‌ಸಿಲ್ ಮುಂದೆ ಇಟ್ಟು ಅವರ ಸಹಿ ಪಡೆದು ಅಲ್ಲಿ ಮಾರಾಟ ಮಾಡಲಾಗಿದೆ ಎಂಬುದಾಗಿ ಹೊರಪಟ್ಟಿದೆ. ಆ ದಿನ ಯಾರು ಯಾರು ಮಿಾಟಿಂಗಿನಲ್ಲಿದ್ದರೋ ಅವರೆಲ್ಲರ ಮೇಲೂ ಸರ್‌ಛಾರ್ಜ್ ಮಾಡಲಾಗುತ್ತದೆ.

ಶ್ರೀ ಕೆ. ಎಂ. ತಮ್ಮಯ್ಯ.—ಅದು ಬಹಳ ಬೆಲೆ ಬಾಳತಕ್ಕ ಭೂಮಿ. ಅದರ ಪಕ್ಕದ ಜಮೀನು 13 ಸಾವಿರಕ್ಕೆ ಬೆಲೆಯಾಗಿದೆ. ಅಂಥ ನಿವೇಶನವನ್ನು 800 ರೂಪಾಯಿಗೆ ಅಧ್ಯಕ್ಷರು ತಮ್ಮ ಅಣ್ಣನ ಹೆಸರಿಗೆ ಮಾರಾಟ ಮಾಡಿರತಕ್ಕದ್ದು ಅಕ್ರಮ. ಹಾಗಿದ್ದರೂ ಸರ್ಕಾರದವರು ಲೈಸೆನ್ಸ್ ಮಂಜೂರು ಮಾಡಿದ್ದಾರೆ. ಅದನ್ನೂ ಕೂಡ ವಜಾ ಮಾಡಬೇಕೆಂದು ಸರ್ಕಾರಕ್ಕೆ ಆರ್ಜಿ ಕೊಟ್ಟಿರಲಿಲ್ಲವೇ ?

ಶ್ರೀ ಬಿ. ಎಂ. ಪಾಟೀಲ್.—ಲೈಸೆನ್ಸ್ ವಿಚಾರ ಸರ್ಕಾರದವರ ಗಮನಕ್ಕೆ ಬಂದಿರಲಿಲ್ಲ. ಅದನ್ನು ತಡೆಯಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಜಿ. ರಾಮೇಗೌಡ.—ಅಲ್ಲಿಯ ಚೀಫ್ ಆಫೀಸರು ಏನು ವರದಿ ಮಾಡಿದ್ದಾರೆ ?

†Indicates that remarks or speeches have not been revised by the member concerned.

ಶ್ರೀ ಬಿ. ಎಂ. ಪಾಟೀಲ್.—ಆ ವಿಚಾರ ನನ್ನಲ್ಲಿಲ್ಲ. ಡಿವಿಜನಲ್ ಆಫೀಸರು ಎನ್‌ಕ್ವೈರಿ ಮಾಡಿ ಅದನ್ನು ಡಿ.ಸಿ.ಗೆ ರವಾನೆ ಮಾಡಿದ್ದಾರೆ. ಅವರು ಸೂಕ್ತ ಕ್ರಮ ಕೈಗೊಳ್ಳುತ್ತಾರೆ. ಅವರು ಅದರ ಬಗ್ಗೆ ಈಗಾಗಲೇ ನೋಟೀಸುಗಳನ್ನು ಇಷ್ಯೂ ಮಾಡಿದ್ದಾರೆ. ಅದಕ್ಕೆ ಜವಾಬ್ ಬಂದ ಕೂಡಲೇ ಕ್ರಮ ಕೈಗೊಳ್ಳುತ್ತಾರೆ.

ಶ್ರೀ ಕೆ. ಎಂ. ತಮ್ಮಯ್ಯ.—ಸರ್ಕಾರ ಈ ವಿಚಾರದಲ್ಲಿ ಪತ್ರ ಬರೆದು 6 ವರ್ಷಗಳಾಯಿತು, ಇನ್ನೂ ವಿಚಾರಣೆ ಮುಗಿದಿಲ್ಲ. ಇನ್ನು ಕ್ರಮ ಕೈಗೊಳ್ಳಬೇಕಾದರೆ ಇನ್ನೆಷ್ಟು ವರ್ಷಗಳು ಬೇಕು ?

ಶ್ರೀ ಬಿ. ಎಂ. ಪಾಟೀಲ್.—ಅವರಿಗೆ 1968ರಲ್ಲೇ ನೋಟೀಸನ್ನು ಇಷ್ಯೂ ಮಾಡಲಾಗಿದೆ. ಅದಕ್ಕೆ ಇಂತಿಷ್ಟು ಕಾಲಾವಕಾಶ ಕೊಡಬೇಕೆಂಬ ನಿಯಮವಿದೆ. ಅವರಿಂದ ಉತ್ತರ ಬಂದ ತಕ್ಷಣ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಮೈಸೂರು ದೇಶದ ಮುನಿಸಿಪಾಲಿಟಿಗಳಲ್ಲಿ ಸೇಕಡ 80ರಷ್ಟು ಮುನಿಸಿಪಾಲಿಟಿಗಳಲ್ಲಿ ಚೀಫ್ ಆಫೀಸರ್ ಪ್ರೆಸಿಡೆಂಟಾಗಿರುವುದರಿಂದ ಈ ತರಹ ಅಕ್ರಮಗಳನ್ನು ಮಾಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಅದರ ಬಗ್ಗೆ ನಾವು ಎಷ್ಟು ಸರ್ಕಾರಕ್ಕೆ ತಿಳಿಸಿದರೂ ಕೂಡ ಯೋಚಿಸಲಾಗುತ್ತಿದೆ, ಅದಕ್ಕೆ ಕಾನೂನು ಪ್ರಕಾರ ನಡೆಯುತ್ತೇವೆಂದು ಹೇಳುತ್ತಾರೆ. ದೇಶದ ಸ್ವತ್ತನ್ನು ಮಾರಾಟಮಾಡುವುದಕ್ಕೆ ಅವರಿಗೆ ಹಕ್ಕುದಾರಿಕೆಯನ್ನು ಕೊಟ್ಟಿದ್ದೇ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಸಾಮಾನ್ಯ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಿದ್ದಾರೆ. ಅವರ ಅಭಿಪ್ರಾಯ ಸೂಕ್ತವಲ್ಲ. ಯಾವುದಾದರೂ ಒಂದು ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಕೊಟ್ಟು ಕಾನೂನ್ ಪ್ರಕಾರ ಇಂತಹವರು ಮಾಡುತ್ತಾ ಇಲ್ಲವೆಂದು ಹೇಳಿದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

Sri M. M. JALISATGI.—If the sales are irregular, I want to know whether the Government has taken steps to cancel the sales ?

Sri B. M. PATIL.—It has come to the notice of the Government that the sales are irregular. So, an enquiry is being conducted. After the enquiry is over, Government will take appropriate action in the matter.

ಶ್ರೀ ಕೆ. ಎಚ್. ಪಾಟೀಲ್.—ನಿಯಮಗಳನ್ನು ಮೀರಿ ನಗರನಭೆಗಳಿಗೆ ಲುಕ್ಸಾನು ಮಾಡುವ ರೀತಿಯಲ್ಲಿ ಸೈಟುಗಳನ್ನು ವಿಲೇವಾರಿಮಾಡುವ ಅಧಿಕಾರಿಗಳ ಬಗ್ಗೆ ತಮ್ಮ ಗಮನಕ್ಕೆ ತಂದರೆ, ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಸ್ಪೆಸಿಫಿಕ್ಕಾಗಿ ಇಂಥಾವರು ಈ ರೀತಿಮಾಡಿದ್ದಾರೆ ಎಂದು ಸರ್ಕಾರದ ಗಮನಕ್ಕೆ ತಂದರೆ ಆಗ ಕಾನೂನು ಪ್ರಕಾರ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

Sri B. B. SAYANAK.—May I know how many Municipal sites have been sold irregularly ?

Sri B. M. PATIL.—The exact number is not available here but some sites have been sold irregularly. Already an enquiry is being conducted.

Construction of a Bridge across the Shalmala River

624. **Sri F. S. PATIL** (Kalaghatgi).—

Will the Minister for Public Works be pleased to state :—

(*a*) whether it has come to their notice that the survey work for the construction of a bridge across Shalamala River, Banadura-Cholamatta Road in Kalaghatgi Taluk is being constructed since many years ;